ಸಂಪುಟ : 1 ಸಂಚಿಕೆ : 1 ಪುಟ : 4 ಜುಲೈ 2017
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ

# ಅಂಗಳ

## ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು
ಡಾ.ಎಂ.ಸಿ.ಮನೋಹರ

ಸಂಚಿಕೆ ಸಂಪಾದಕರು
ಜಾಯ್ಲಿನ್ ಸಿಲ್ವಿಯಾ ಆಂಡ್ರಾಡೆ

## 'ಅಂಗಳ' ಪ್ರವೇಶಕ್ಕೆ ಮುನ್ನ...

'ಬೆಳೆಯುವ ಸಿರಿ ಮೊಳಕೆಯಲ್ಲಿ...' ಹೌದು, ಒಂದು ಗಿಡ ಅಥವಾ ಮರ ಭವಿಷ್ಯದಲ್ಲಿ ಎಷ್ಟು ಹುಲುಸಾಗಿ ಬೆಳೆಯಬಲ್ಲದು ಎಂಬುದನ್ನು ಅದರ ಮೊಳಕೆಯಲ್ಲೇ ಗುರುತಿಸಬಹುದು. ಆದರೆ ಆ ಮೊಳಕೆಗೆ ಸೂಕ್ತವಾದ ಮಣ್ಣು, ನೀರು, ಗೊಬ್ಬರ ಹಾಗೂ ವಾತಾವರಣವೂ ಅವಶ್ಯಕ. ಮಕ್ಕಳು ಮುಂದೆ ಏನಾಗುತ್ತಾರೆ ಎಂಬುದನ್ನು ಅವರ ಈಗಿನ ಆಸಕ್ತಿ, ಅಭಿರುಚಿ ಮತ್ತು ಚಟುವಟಿಕೆಗಳು ನಿರ್ಧರಿಸುತ್ತವೆ. ಅಂತೆಯೇ, ಅದಕ್ಕೆ ಪೂರಕ ವಾತಾವರಣ ಮತ್ತು ಅವಕಾಶಗಳನ್ನು ಕಲ್ಪಿಸಿಕೊಡುವುದು ಪಾಲಕರು, ಶಿಕ್ಷಕರು ಹಾಗೂ ಶಾಲೆಗಳ ಕರ್ತವ್ಯ.

ಈ ನಿಟ್ಟಿನಲ್ಲಿ, ನಮ್ಮ ಶಾಲೆಯ ಮಕ್ಕಳಲ್ಲಿ ಓದಿನ ಆಸಕ್ತಿ ಬೆಳೆಸುವುದು ಮತ್ತು ಸಾಹಿತ್ಯ, ಕಲೆ, ಸೃಜನಶೀಲತೆಯಂತಹ ಅವರ ಚಟುವಟಿಕೆಗಳಿಗೆ ಸೂಕ್ತ ವೇದಿಕೆ ಒದಗಿಸಿಕೊಡಬೇಕು ಎಂಬುದು ನಮ್ಮ ಬಹಳ ದಿನಗಳ ಆಶಯವಾಗಿತ್ತು. ಅಲ್ಲದೆ, ಶಾಲೆಯಲ್ಲಿ ವರ್ಷವಿಡೀ ನಡೆಯುವ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳ ಮಾಹಿತಿಯನ್ನು ಪಾಲಕರಿಗೆ ನೀಡುವುದು, ಶಿಕ್ಷಕರು ಹಾಗೂ ಮಕ್ಕಳ ಜ್ಞಾನ, ತಿಳಿವಳಿಕೆ ಮತ್ತು ಕೌಶಲ್ಯಗಳನ್ನು ಹೆಚ್ಚಿಸಬೇಕೆಂಬುದೂ ನಮ್ಮ ಉದ್ದೇಶವಾಗಿತ್ತು. ಇದಕ್ಕಾಗಿ ಶಾಲಾ ಪತ್ರಿಕೆ ಆರಂಭಿಸುವ ಹಂಬಲವಿತ್ತು. ಆ ಕನಸೀಗ ನನಸಾಗಿದೆ.

ಅರಿವು ಶಾಲೆಯ ವತಿಯಿಂದ ಇನ್ನು ಮುಂದೆ 'ಅಂಗಳ' ಮಾಸಪತ್ರಿಕೆ ಪ್ರಕಟಗೊಳ್ಳಲಿದೆ. ಅದರ ಚೊಚ್ಚಲ ಸಂಚಿಕೆ ಇದೀಗ ನಿಮ್ಮ ಕೈಯಲ್ಲಿದೆ. ಮಕ್ಕಳು, ಶಿಕ್ಷಕರು, ಪಾಲಕರು ಹಾಗೂ ಸಂಪನ್ಮೂಲ ವ್ಯಕ್ತಿಗಳು 'ಅಂಗಳ'ವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬಹುದು. ಯಾವುದೇ ಕೆಲಸವನ್ನು ಪ್ರಾರಂಭಿಸುವುದು ಸುಲಭ. ಆದರೆ ಅದನ್ನು ನಿರಂತರ ಮುಂದುವರಿಸಿಕೊಂಡು ಹೋಗುವುದು ಸವಾಲು. ಅಂತಹ ಸವಾಲು ಸ್ವೀಕರಿಸುವುದಕ್ಕೆ ನಮ್ಮ ಶಿಕ್ಷಕರ ಬಳಗ ಬೆಂಬಲವಾಗಿ ನಿಂತಿದೆ. ತಿಂಗಳಿಗೊಬ್ಬರಂತೆ ಸಂಚಿಕೆ ಸಂಪಾದಕರ ಜವಾಬ್ದಾರಿಯನ್ನು ಶಿಕ್ಷಕರು ನಿರ್ವಹಿಸಲಿದ್ದಾರೆ. ಪೋಷಕರಾದ ಪತ್ರಕರ್ತ ಮುಳ್ಳೂರು ರಾಜು ಅವರು 'ಅಂಗಳ'ದ ಮಾರ್ಗದರ್ಶಕರಾಗಿ, ಬೆನ್ನೆಲುಬಾಗಿ ಇರಲಿದ್ದಾರೆ. ಸ್ನೇಹಿತರಾದ ಸಂದೇಶ್ ಅವರು ಸೊಗಸಾಗಿ ಪುಟ ವಿನ್ಯಾಸ ಮಾಡಿಕೊಟ್ಟಿದ್ದಾರೆ.

ಈ ಸಂದರ್ಭದಲ್ಲಿ ನನಗೊಂದು ಪ್ರಸಂಗ ನೆನಪಾಗುತ್ತಿದೆ. ಕನ್ನಡದ ಜನಪ್ರಿಯ ಲೇಖಕ ಪೂರ್ಣಚಂದ್ರ ತೇಜಸ್ವಿ ಅವರನ್ನು ಅಭಿಮಾನಿಯೊಬ್ಬರು, 'ಸರ್, ನಿಮ್ಮ ಬರವಣಿಗೆಗೆ ಇನ್ಸ್ಪಿರೇಷನ್ (ಸ್ಫೂರ್ತಿ) ಏನು?' ಎಂದು ಕೇಳಿದ್ದರು. ಅದಕ್ಕೆ ತೇಜಸ್ವಿ ಅವರು ತಮ್ಮ ಎಂದಿನ ಲಘು ಧಾಟಿಯಲ್ಲಿ, 'ಇನ್ಸ್ಪಿರೇಷನ್ ಏನಿಲ್ಲ ಕಣ್ರೀ, ಬರೀ ಪರ್ಸ್ಪಿರೇಷನ್ (ಬೆವರು/ಶ್ರಮ) ಎಂದು ಉತ್ತರಿಸಿದ್ದರು. ತೇಜಸ್ವಿ ಅವರ ಅಭಿಪ್ರಾಯದಂತೆ ಬರವಣಿಗೆ ಅಪಾರ ಪರಿಶ್ರಮ ಬೇಡುತ್ತದೆ. ಸೃಜನಶೀಲತೆ ಮತ್ತು ಪರಿಶ್ರಮದಿಂದ ಮೂಡಿದ ಲೇಖನಗಳು ಬರೆದವರಿಗೂ, ಓದಿದವರಿಗೂ ಸಂತಸ ನೀಡುತ್ತವೆ. ಅಂತಹ ಕೆಲಸವನ್ನು 'ಅಂಗಳ' ಮಾಡುತ್ತದೆಂಬ ನಂಬಿಕೆ ನನಗಿದೆ.



| ಡಾ.ಎಂ.ಸಿ.ಮನೋಹರ
ಮ್ಯಾನೇಜಿಂಗ್ ಟ್ರಸ್ಟಿ,
ಅರಿವು ಶೈಕ್ಷಣಿ ಮತ್ತು ಸಾಂಸ್ಕೃತಿಕ ಟ್ರಸ್ಟ್




## ತೆರೆ ಸರಿಸಿದ 'ತಲೆ ಬುಡವಿಲ್ಲದ ಕಥೆ'

ಅಂದು ಮಕ್ಕಳು ಬೇಸಿಗೆ ರಜೆ ಮುಗಿಸಿಕೊಂಡು ಮೊದಲ ದಿನ ಶಾಲೆಗೆ ಬಂದ ಸಂಭ್ರವ ುದಲ್ಲಿದ್ದರು. ಸಾಮಾನ್ಯವಾಗಿ ರಜೆ ಅವಧಿಯನ್ನು 'ಮಕ್ಕಳ ಪಾಲಿನ ಸಂಭ್ರಮ' ಎನ್ನುವುದುಂಟು. ಆದರೆ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಶಾಲಾವಧಿಯೇ ಸಂಭ್ರಮ! ಅದಿರಲಿ, ಎರಡು ತಿಂಗಳ ಬಳಿಕ ಮಕ್ಕಳನ್ನು ನೋಡಿದ್ದರಿಂದ ಅಂದು ನಾನೂ ಸಂಭ್ರಮದಲ್ಲಿದ್ದೆ.

'ಬೇಸಿಗೆ ರಜೆ ಹೇಗಿತ್ತು?' ನಾನು ಕೇಳಿದೆ. ತಕ್ಷಣ ಮಕ್ಕಳು ರಜೆ ಅವಧಿಯಲ್ಲಿ ತಾವು ಹೋಗಿದ್ದ ಊರುಗಳು, ಅಲ್ಲಿ ಕಂಡ ವ್ಯಕ್ತಿಗಳು, ನೋಡಿದ ಸ್ಥಳಗಳು, ಕೇಳಿದ ಮಾತುಗಳು... ಹೀಗೆ ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ಒಬ್ಬೊಬ್ಬರಾಗಿ ಹೇಳತೊಡಗಿದರು.

ಮಕ್ಕಳು ಹಂಚಿಕೊಂಡ ವೈವಿಧ್ಯಮಯ ವಿಷಯ ಮತ್ತು ಸಂಗತಿಗಳನ್ನು ಕೇಳಿದ ನನಗೆ ಸ್ಥಳದಲ್ಲೇ ಒಂದು ಆಲೋಚನೆ ಹೊಳೆಯಿತು. ಇವರ ಅನುಭವಗಳನ್ನೆಲ್ಲ ಕ್ರೋಡೀಕರಿಸಿ ಒಂದು ಕಿರು ನಾಟಕ ಮಾಡಿಸಿದರೆ ಹೇಗೆ? ನಾನು ತಡ ಮಾಡಲಿಲ್ಲ. ನಮ್ಮ ಮಕ್ಕಳೇನು ಕಡಿಮೆಯೇ? ಅವರೂ ಕಿಂಚಿತ್ತೂ ಸಮಯ ತೆಗೆದುಕೊಳ್ಳಲಿಲ್ಲ. 'ಓ, ಆಗಬಹುದು' ಎಂದುಬಿಟ್ಟರು. 'ಸರಿ, ಹಾಗಾದರೆ ನಾಳೆ ಶಾಲೆಗೆ ಬರುವಾಗ ಉದ್ದೇಶಿತ ಕಿರು ನಾಟಕದ ಬಗ್ಗೆ ಪ್ರತಿಯೊಬ್ಬರೂ ಬರೆದುಕೊಂಡು ಬನ್ನಿ' ಎಂದು ತಿಳಿಸಿದೆ.

ಮಾರನೇ ದಿನ ಎಲ್ಲ ಮಕ್ಕಳು ತಮಗೆ ತೋಚಿದಂತೆ ಬರೆದುಕೊಂಡು ಬಂದರು. ವೈವಿಧ್ಯಮಯ ಬರಹಗಳು ನನ್ನ ಕೈ ಸೇರಿದವು. ಅದನ್ನೆಲ್ಲ ನೋಡಿದ ನನಗೆ 'ಈ ಪೈಕಿ ಕೆಲವರು ಭವಿಷ್ಯದ ಕಥೆಗಾರರು, ಸಂಭಾಷಣೆಕಾರರು ಮತ್ತು ನಾಟಕ ರಚನಾಕಾರರು' ಅನಿಸಿದ್ದು ಸುಳ್ಳಲ್ಲ.

ಸರಿ, ಈ ನಾಟಕಕ್ಕೆ ಒಂದು ಹೆಸರು ಕೊಡಬೇಕಲ್ಲ ಎಂದೆ. ಎಲ್ಲರೂ ಸೇರಿ ಒಂದು ಹೆಸರು ಕೊಟ್ಟೇಬಿಟ್ಟರು. 'ತಲೆ ಬುಡವಿಲ್ಲದ ಕಥೆ' ಎಂಬುದು ಆ ನಾಟಕದ ಹೆಸರಾಯಿತು. ಬೇಸಿಗೆ ರಜೆಯಲ್ಲಿ ಮಕ್ಕಳು ಭೇಟಿ ನೀಡಿದ್ದ ೨೪ ಊರುಗಳು, ಅಲ್ಲಿನ ವಿಶೇಷತೆಗಳು ಹಾಗೂ ಪ್ರತಿಯೊಂದು ಊರಿಗೂ ಇರುವ ಸಂಬಂಧಗಳನ್ನು ಒಂದು ಎಳೆಯಾಗಿಸಿಕೊಂಡು ಕಲ್ಪನೆ, ತರ್ಕ ಮತ್ತು ಕಲೆಗಾರಿಕೆ ಬಳಸಿ ಒಂದನ್ನೊಂದು ಜೋಡಿಸುವ ಮೂಲಕ ಮಕ್ಕಳೇ ಕಿರು ನಾಟಕ ಸಿದ್ಧಪಡಿಸಿದರು. ಈ ಮೂಲಕ ರಜೆ ಅವಧಿಯಲ್ಲಿ ಚದುರಿಹೋಗಿದ್ದ ತಮ್ಮ ಅನುಭವ ಮತ್ತು ವ್ಯಕ್ತಿತ್ವಕ್ಕೊಂದು ಚೌಕಟ್ಟು ನೀಡಿದರು. ಬರವಣಿಗೆ, ಚರ್ಚೆ, ಕಲ್ಪನೆ ಮತ್ತು ವಿಸ್ತರಣೆ ಮೂಲಕ ಇದು ಸಾಧ್ಯವಾಯಿತು. ೨೦ ನಿಮಿಷಗಳ ನಾಟಕದಲ್ಲಿ ೨೪ ಊರುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಅನಿವಾರ್ಯತೆ ಇದ್ದುದರಿಂದ ಮಕ್ಕಳ ಕಲ್ಪನಾಶಕ್ತಿಗೆ ಒಂದು ಅದ್ಭುತ ಅವಕಾಶ ಹಾಗೂ ವೇದಿಕೆ ದೊರೆತಂತಾಯಿತು.

ನಾಟಕದ ಕೆಲವೊಂದು ದೃಶ್ಯಗಳು ಈಗಿನ ಸಿನಿಮಾಗಳಂತೆ ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಆದರೆ ಕೆಲವೊಂದು ದೃಶ್ಯಗಳು ಎಂಬತ್ತರ ದಶಕದ ಸಿನಿಮಾಗಳಲ್ಲಿನ ಭಾವುಕತೆಯ ದೃಶ್ಯಗಳಂತೆ ನಿರೂಪಿಸಲ್ಪಟ್ಟವು. ಪ್ರಸ್ಕತ ಶೈಕ್ಷಣಿಕ ವರ್ಷದ ಪೋಷಕರ ಮೊದಲ ಸಭೆಯಲ್ಲಿ ಕಚ್ಚಾ ಮಾದರಿಯಲ್ಲಿ ಪ್ರದರ್ಶನಗೊಂಡ 'ತಲೆ ಬುಡವಿಲ್ಲದ ಕಥೆ' ಇಡೀ ವರ್ಷದ ಶಾಲಾ ಅವಧಿಯ ತೆರೆ ಸರಿಸಿದಂತೆ ಇತ್ತು.

| ಬರ್ಟಿ ಎಫ್.ಒಲಿವೆರಾ



## ಸಂಪಾದಕೀಯ



ಆತ್ಮೀಯ ಓದುಗರೆ,

ಅರಿವು ಶಾಲೆ 10ನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಸಂದರ್ಭದಲ್ಲಿ ಶಾಲಾ ಮಾಸಪತ್ರಿಕೆಯ ಮೊದಲ ಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತಸವಾಗುತ್ತಿದೆ. ಈ ಸಾಧನೆಗೆ ಕಾರಣರಾದ ಸಂಸ್ಥೆಯ ಸ್ಥಾಪಕ ಸದಸ್ಯರನ್ನು ಅಭಿನಂದಿಸುತ್ತೇನೆ.

ಈ ವರ್ಷ ನಮ್ಮ ಶಾಲೆಗೆ ಹೊಸದಾಗಿ 38 ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕಿಯರು (ಸುಮನಾ ಮತ್ತು ಸುಧಾ) ಸೇರ್ಪಡೆಯಾಗಿದ್ದಾರೆ. 9 ಮತ್ತು 10ನೇ ತರಗತಿ ಆರಂಭಕ್ಕೆ ಅನುಮತಿ ದೊರೆತಿದ್ದು, 9ನೇ ತರಗತಿ ಆರಂಭಗೊಂಡಿದೆ. ಶಾಲೆಯಲ್ಲಿ ಒಟ್ಟು ಮಕ್ಕಳ ಸಂಖ್ಯೆ 154ಕ್ಕೆ ಏರಿದೆ. ಇದರ ಜತೆಗೆ ನಮ್ಮ ಜವಾಬ್ದಾರಿಯೂ ಹೆಚ್ಚಿದೆ. ಹೆಸರಾಂತ ಹಿಂದೂಸ್ತಾನಿ ಗಾಯಕ, ಶಿಕ್ಷಕರಾದ ಪಂ.ವೀರಭದ್ರಯ್ಯ ಹಿರೇಮಠ ಅವರು ಸಂಗೀತ ವಿಭಾಗಕ್ಕೆ ಮತ್ತು ಹುಬ್ಬಳ್ಳಿಯ ಕಲಾವಿದರಾದ ಕಾಜು ಅವರು ಚಿತ್ರಕಲೆ–ಕರಕುಶಲ ವಿಭಾಗಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿರುವುದು ನಮ್ಮ ಅದೃಷ್ಟವೇ ಸರಿ. ಕಾರ್ಯ ಯೋಜನೆಯಲ್ಲಿ ಪಠ್ಯದ ಜತೆಗೆ ಪ್ರವಾಸ, ನಾಟಕ, ನೃತ್ಯ, ಕಲೆ, ಹಾಡುಗಾರಿಕೆ ಮತ್ತು ಬರವಣಿಗೆಗೆ ಪ್ರಾಮುಖ್ಯತೆ ನೀಡಿ, ಆ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲವಾಗುವಂತೆ ಮಾಡಲಾಗಿದೆ. ಈ ವರ್ಷದ ಮೊದಲ ಶಿಕ್ಷಕ–ಪೋಷಕರ ಸಭೆ ಜೂನ್ 10 ರಂದು ನಡೆಯಿತು. ಸಭೆಯಲ್ಲಿ ಫಲಿತಾಂಶಾಧಾರಿತ ಪಠ್ಯಕ್ರಮದ ಬಗ್ಗೆ ವಿವರಿಸಿದ ಶಾಲೆಯ ಸಂಚಾಲಕರಾದ ಕುಶಲ್ ಅವರು, ಪೋಷಕರ ಜತೆ ಸಂವಾದ ನಡೆಸಿದರು. ಶಾಲಾ ವಾಹನಗಳ ಚಾಲಕರು ಸಭೆಯಲ್ಲಿ ಹಾಜರಿದ್ದು, ಪೋಷಕರ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ಆಯಾ ತರಗತಿಯ ಶಿಕ್ಷಕರ ಜತೆ ಪೋಷಕರು ತಮ್ಮ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಕುರಿತು ವೈಯಕ್ತಿಕವಾಗಿ ಚರ್ಚಿಸಿದರು. ಈ ತಿಂಗಳ ಕೊನೆಗೆ ಶಾಲೆಯ ವಿಸ್ತರಿತ ಕಟ್ಟಡದ ಕೆಲಸ ಮುಗಿಯಲಿದ್ದು, 5ನೇ ತರಗತಿ ನಂತರದ ವಿದ್ಯಾರ್ಥಿಗಳು ವಿಷಯವಾರು ಕೊಠಡಿಗಳ ಸೌಲಭ್ಯ ಪಡೆಯಲಿದ್ದಾರೆ. ಈ 'ಅಂಗಳ' ಸಂಚಿಕೆಯನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಅರಿವು ಆಡಳಿತ ಮಂಡಳಿ ಮತ್ತು ಲೇಖನಗಳನ್ನು ನೀಡಿ ಸಹಕರಿಸಿದ ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಧನ್ಯವಾದಗಳು.



| ಜಾಯ್ಲಿನ್ ಸಿಲ್ವಿಯಾ ಆಂಡ್ರಾಡೆ
ಸಂಚಿಕೆ ಸಂಪಾದಕರು

# ಜೂನ್ ತಿಂಗಳ ಕಾರ್ಯಕ್ರಮಗಳು....

## ಮನಸೋಲುವಂತೆ ಮಾಡಿದ ಅಕಾರ್ಡಿಯನ್ ವಾದ್ಯ



ಜೂನ್ ತಿಂಗಳ ಮೊದಲ ಕಾರ್ಯಕ್ರಮವಾಗಿ ಅಪರೂಪದ ಅಕಾರ್ಡಿಯನ್ ವಾದ್ಯ ಸಂಗೀತ ಗೋಷ್ಠಿ ನಡೆಯಿತು. ಬೆಂಗಳೂರಿನ ಟ್ರೆಮೋಲೋಸ್ ತಂಡದ ಬೆಣ್ಣೆ ರವಿ, ಪ್ರಕಾಶ್ ಮತ್ತು ಸಂಜೀವ್‌ದಾಸ್ ಮಾಹಾಪಾತ್ರ ಅವರು ನಡೆಸಿಕೊಟ್ಟ ಈ ಕಾರ್ಯಕ್ರಮ ಸಭಿಕರ ಮನ ಗೆದ್ದಿತು. ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಜತೆಗೆ ಹಿಂದಿಯ ಜೀನಾ ಯಹಾ ಮರ್‍ನಾ ಯಹಾ, ಕನ್ನಡದ ಭಾಗ್ಯದ ಬಳೆಗಾರ ಹೋಗಿ ಬಾ, ಬ್ರಹ್ಮ ನಿಂಗೆ ಜೋಡಿಸ್ತೀನಿ ಎಂಡ ಮುಟ್ಟಿದ್ ಕೈನಾ ಹಾಡುಗಳನ್ನೂ ಅಕಾರ್ಡಿಯನ್ ವಾದ್ಯದಲ್ಲಿ ನುಡಿಸಿ ಸಭಿಕರನ್ನು ರಂಜಿಸಿದರು. ವಾದ್ಯದ ಬಗೆಗಿನ ಮಕ್ಕಳ, ಹಿರಿಯರ ಅನೇಕ ಕುತೂಹಲಕರ ಪ್ರಶ್ನೆಗಳಿಗೆ ಉತ್ತರಿಸಿದರು. ಈ ಕಾರ್ಯಕ್ರಮಕ್ಕೆ ಮೊದಲು ಪಂ. ವೀರಭದ್ರಯ್ಯ ಹಿರೇಮಠ ಅವರು ಸಂಪಾದಿಸಿರುವ 'ಅರಿವಿನ ಹಾಡು' ಸ್ವರಪ್ರಸ್ತಾರ ಸಹಿತ ಪುಸ್ತಕವನ್ನು ರೇವತಿ ಶರ್ಮಾ ಬಿಡುಗಡೆ ಮಾಡಿದರು. ಜತೆಗೆ, ಡಾ.ಮನೋಹರ ಅವರ ನಿರ್ದೇಶನದ, ಕನ್ನಡಿ ಕ್ರಿಯೇಷನ್ಸ್ ನಿರ್ಮಾಣದ 'ನೀಲಂಬೂರಿನ ಜೈವಿಕ ಉದ್ಯಾನವನ' ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಾಯಿತು.

## ಮಕ್ಕಳ ಆಸಕ್ತಿ ತಣಿಸಿದ ಕನ್ನಡ ಕಥೆ ಕಾರ್ಯಾಗಾರ

ಜೂನ್ 13 ರಂದು 5, 6 ಮತ್ತು 7 ನೇ ತರಗತಿ ಮಕ್ಕಳಿಗೆ ಪತ್ರಕರ್ತ, ಸಾಹಿತಿ ಮಂಜುನಾಥ್‌ಲತಾ ಅವರು ಕಥೆಯ ಬಗ್ಗೆ ಕಾರ್ಯಾಗಾರ ನಡೆಸಿಕೊಟ್ಟರು. ಕಥೆ ಎಂದರೇನು? ಕಥೆ ಬರೆವುಯುವುದು, ಹೇಳುವುದು ಹೇಗೆ ಎಂಬ ಪ್ರಶ್ನೆಗಳೊಂದಿಗೆ ಕಾರ್ಯಗಾರವನ್ನು ಮುನ್ನಡೆಸಿದರು.ನಿಮಗೆಲ್ಲ ಕಥೆ ಹೇಳುವವರು ಯಾರು? ಕಥೆಗಳು ಎಲ್ಲೆಲ್ಲಿ ಸಿಗುತ್ತವೆ ಎಂಬ ಪ್ರಶ್ನೆಗಳಿಗೆ ಮಕ್ಕಳಿಂದಲೇ ಉತ್ತರ ಪಡೆದರು. ಮಕ್ಕಳಿಂದ ಕಥೆ ಹೇಳಿಸಿ, ಬರೆಸಿದ್ದಲ್ಲದೆ, ಅಪೂರ್ನ ಕಥೆಯನ್ನು ಪೂರ್ಣಗೊಳಿಸಲು ಅವಕಾಶ ಮಾಡಿಕೊಟ್ಟರು. ಕಥೆ ಬರೆಯುವುದನ್ನು ಎಲ್ಲರೂ ರೂಡಿಸಿಕೊಳ್ಳುವಂತೆ ಮಕ್ಕಳಿಗೆ ಕಿವಿಮಾತು ಹೇಳಿದರು. ಮಕ್ಕಳು ಲವಲವಿಕೆಯಿಂದ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.





## ಮಾಸ್ತಿ ಜನ್ಮ ದಿನಾಚರಣೆ

ಕನ್ನಡದ ಕವಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 126ನೇ ಜನ್ಮ ದಿನದ ಪ್ರಯುಕ್ತ ಜೂನ್ 6 ರಿಂದ 9 ರವರೆಗೆ ಬೆಳಗ್ಗೆ 10 ರಿಂದ 10.45 ವರೆಗೆ 6, 7, 8 ಮತ್ತು 9ನೇ ತರಗತಿ ಮಕ್ಕಳಿಂದ 'ಸವಿಯಬ್ಬೆ' ಮಾಸ್ತಿಯವರ ಸಣ್ಣ ಕಥೆಯನ್ನು ಓದಿಸಲಾಯಿತು. ಅಲ್ಲದೆ, 'ನಿಜಗಲ್ಲಿನ ರಾಣಿ' ಕಥೆಯನ್ನು ಕೇಳಿಸಲಾಯಿತು. ಕಥೆಯ ಸಾರಾಂಶ ಹೇಳಿಸಲಾಯಿತು. ಕಥೆಯಲ್ಲಿ ಬರುವ ಕೆಲವು ಸಂದರ್ಭಗಳ ಬಗ್ಗೆ ಚರ್ಚಿಸಲಾಯಿತು. ಮಾಸ್ತಿಯವರ ಜನ್ಮ ದಿನಾಂಕ, ಸ್ಥಳ, ವೃತ್ತಿ ಮತ್ತು ಕೃತಿಗಳನ್ನು ಪರಿಚಯಿಸಲಾಯಿತು.

# ಕರಕುಶಲ ಕಲೆಯೆಂಬ ಸಂತಸದ ಕಲಿಕೆ



ಬಣ್ಣದ ಕಾಗದ ನೋಡಿದರೆ ಮಕ್ಕಳಷ್ಟೇ ದೊಡ್ಡವರಿಗೂ ಮನ ಮುದಗೊಳ್ಳುತ್ತದೆ. ಕ್ಷಣಕಾಲಕ್ಕಾದರೂ ಬಾಲ್ಯದ ನೆನಪಿನ ಸಾಗರದಲ್ಲಿ ಮುಳುಗೇಳುತ್ತೇವೆ.

ಮೇಲ್ನೋಟಕ್ಕೆ ಈ ಚಟುವಟಿಕೆಗಳು ಸಮಯ ಸಾಗುವ ಸಾಧನದಂತೆ ಕಂಡರೂ, ಮಕ್ಕಳ ಕಲಿಕೆಯಲ್ಲಿ ಈ ಕಾಗದಗಳ ಕರಕುಶಲತೆಯ ಪಾತ್ರ ದೊಡ್ಡದು. ಶೈಕ್ಷಣಿಕ ದೃಷ್ಟಿಯಿಂದಲೂ ಈ ಚಟುವಟಿಕೆಗಳ ಪ್ರಾಮುಖ್ಯತೆ ಬಹಳ ಮಹತ್ವದ್ದು. ಮಗುವು ಈ ಚಟುವಟಿಕೆಗಳ ಮೂಲಕ ಸಂತೋಷ ಪಡೆಯುತ್ತದೆ. ಆದರೆ ತನಗೇ ಗೊತ್ತಿಲ್ಲದಂತೆ ಸಾಕಷ್ಟು ಕೌಶಲಗಳನ್ನು ವೃದ್ಧಿಸಿಕೊಳ್ಳುತ್ತದೆ. ಇಲ್ಲಿ ಮಗುವಿನ ಯೋಚನಾಶಕ್ತಿ, ದೃಷ್ಟಿ ಮತ್ತು ಕೈಗಳು ಒಟ್ಟಿಗೆ ಸುಸಂಘಟಿತವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತವೆ. ತಾನು ಮಾಡಿರುವುದನ್ನು ವಿವರಿಸುವಾಗ ಯೋಚನಾ ಲಹರಿ, ಪದಸಂಪತ್ತು ಹೆಚ್ಚಾಗಿ, ಸಮಸ್ಯಾಪರಿಹಾರ ಮತ್ತು ವಿಮರ್ಶಾತ್ಮಕ ದೃಷ್ಟಿಕೋನದ ಬೆಳವಣಿಗೆಯಾಗುತ್ತದೆ.


ಕರಕುಶಲತೆಯ ಅಭ್ಯಾಸಗಳಿ0ದ ಮಗುವಿನಲ್ಲಿ ಸ್ವಕಲಿಕೆಯಾಗಿ ಆತ್ಮಗೌರವವೂ ಬೆಳೆಯುತ್ತದೆ. ಇನ್ನು ತರಗತಿಯ ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮಾದರಿಗಳನ್ನು ತಯಾರಿಸುವುದರಿಂದ ಇತರ ಮಕ್ಕಳೊಡನೆ ಸ್ನೇಹ –ಸಹಕಾರ ಹೆಚ್ಚಾಗುತ್ತದೆ ಹಾಗೂ ಸೌಂದರ್ಯ ಪ್ರಜ್ಞೆಯೂ ಬೆಳೆಯುತ್ತದೆ. ಆದ್ದರಿಂದ ಮಕ್ಕಳ ಈ ಸಂತಸದ ಕಲಿಕೆಯನ್ನು ಪ್ರೋತ್ಸಾಹಿಸೋಣ.



| ರಜನಿ ಜೆ. ಶಿಕ್ಷಕಿ

# ಪೂಜಾಗಾಂಧಿ ಮೇಲೆ ಕೋಪವಿತ್ತು!

ನಾನು ಮೊದಲು ನೋಡಿದ ಸಿನಿಮಾ 'ನೆನಪಿರಲಿ'. ಆಗ ನಾನು ಬಹಳ ಚಿಕ್ಕವನು. ಎರಡನೇ ಸಿನಿಮಾ 'ಮುಂಗಾರು ಮಳೆ'. ಆ ಸಿನಿಮಾವನ್ನು ನಾನು ತುಂಬಾ ಇಷ್ಟಪಟ್ಟಿದ್ದೆ. ಆ ಸಿನಿಮಾದ ಎಲ್ಲ ಹಾಡುಗಳನ್ನೂ ಹಾಡುತ್ತಿದ್ದೆ. ವೀಣಾ ಅಕ್ಕ (ಟೀಚರ್) ಅವರನ್ನೇ ಪೂಜಾಗಾಂಧಿಯೆಂದು ಭಾವಿಸಿಕೊಂಡುಬಿಟ್ಟಿದ್ದೆ! ಆದ್ದರಿಂದ ಅವರನ್ನು ಕಂಡಾಗಲೆಲ್ಲಾ 'ಗಣೇಶ್ ಎಲ್ಲಿ' ಎಂದು ಕೇಳುತ್ತಿದ್ದೆ. ಆದರೆ ನಂತರ ಪೂಜಾಗಾಂಧಿಯನ್ನು ಬೇರೆ ಸಿನಿಮಾಗಳಲ್ಲಿ ನೋಡಿದಾಗ ನನಗೆ ಕೋಪ ಬರುತ್ತಿತ್ತು. ಈಕೆ ಗಣೇಶನನ್ನು ಬಿಟ್ಟು ಬೇರೆಯವರ ಜತೆ ಇದ್ದಾರಲ್ಲ? ಅದು ತಪ್ಪು ಎಂದು ಹೇಳುತ್ತಿದ್ದೆ! 'ಮುಂಗಾರು ಮಳೆ' ಸಿ.ಡಿ. ಸಿಕ್ಕಿದ್ದರಿಂದ ಆ ಸಿನಿಮಾವನ್ನು ಸುಮಾರು 50–60 ಸಲ ನೋಡಿದ್ದೇನೆ. ಬಳಿಕ ಸಿ.ಡಿ. ಕೆಟ್ಟುಹೋಯಿತು. ಆ ಸಂದರ್ಭದಲ್ಲಿ ಯಾರಾದರು 'ನಿನ್ನ ಹೆಸರೇನು?' ಎಂದು ಕೇಳಿದರೆ, 'ಮುಂಗಾರು ಮಳೆ ಗಣೇಶ್ ಚಿರಂತ್' ಎಂದು ಹೇಳುತ್ತಿದ್ದೆ. ಸ್ವಲ್ಪ ದಿನಗಳ ಬಳಿಕ ನನಗೆ ವಾಸ್ತವತೆಯ ಅರಿವಾಯಿತು.



| ಚಿರಂತ್ ಜೆ. ಎಂಟನೇ ತರಗತಿ

# ಐಶ್ವರ್ಯ ಮತ್ತು ಬಡತನ

ಒಂದು ಊರಿನಲ್ಲಿ ಒಬ್ಬಳು ಹುಡುಗಿ ಇದ್ದಳು. ಅವಳ ಹೆಸರು ಐಶ್ವರ್ಯ. ಆದರೆ ಆಕೆ ತುಂಬಾ ಬಡವಳಾಗಿದ್ದಳು. ಒಂದು ದಿನ ಅವಳಿಗೆ ತುಂಬಾ ಹಸಿವಾಗಿತ್ತು. ಆದರೆ ಅವಳ ಹತ್ತಿರ ಹಣವಿರಲಿಲ್ಲ. ಆಕೆ ಸಂತೆಗೆ ಹೋದಳು. ಅಲ್ಲಿ ಎಷ್ಟೊಂದು ಜಿಲೇಬಿಗಳಿದ್ದವು. ಅವಳಿಗೆ ತಿನ್ನಬೇಕೆಂದು ಆಸೆಯಾಯಿತು. ಅಂಗಡಿಯ ಹತ್ತಿರ ಹೋದಳು. ಅಂಗಡಿಯವನಿಗೆ ಕೇಳಿದಳು. ಆದರೆ ಅವಳ ಬಳಿ ಜಿಲೇಬಿ ತೆಗೆದುಕೊಳ್ಳಲು ಹಣವಿರಲಿಲ್ಲ. ಆದ್ದರಿಂದ ಮನೆಗೆ ವಾಪಸ್ ಹೋದಳು. ಮರುದಿನ ಅವಳಿಗೆ ಕೆಲಸಕ್ಕೆ ಹೋಗಬೇಕೆಂಬ ಆಸೆಯಾಯಿತು. ಬೆಳಗ್ಗೆ ಎದ್ದು ಹಲ್ಲು ಉಜ್ಜಿ, ಸ್ನಾನ ಮಾಡಿಕೊಂಡು ಕೆಲಸ ಹುಡಿಕಿಕೊಂಡು ಹೋದಳು. ಅಲ್ಲಿ ಅವಳಿಗೆ ಪರಿಚಯದವರು ಇದ್ದರು. ಅವರು ಕೆಲಸ ಕೊಡಿಸಿದರು. ಅಂದಿನಿಂದ ಅವಳು ಪ್ರತಿದಿನ ಕೆಲಸಕ್ಕೆ ಹೋಗುತ್ತಿದ್ದಳು. ಸಂಜೆಯಾದ ಮೇಲೆ ಮನೆಗೆ ಬರುತಿದ್ದಳು. ಅವಳಿಗೆ ಸಂಬಳ ಬರುತ್ತಿತ್ತು. ಮತ್ತೊಂದು ದಿನ ಜಾತ್ರೆಗೆ ಹೋದಳು. ತನಗೆ ಇಷ್ಟವಾದ ಜಿಲೇಬಿಯನ್ನು ದುಡ್ಡು ಕೊಟ್ಟು ಕೊಂಡುಕೊಂಡು ತಿಂದು ಖುಷಿಯಾಗಿ ಮನೆಗೆ ಹಿಂತಿರುಗಿದಳು.



| ಎಂ.ಆರ್.ಪ್ರಜ್ಞಾ 3ನೇ ತರಗತಿ

## ಮನಸೆಂಬ ಗುಡಿಯಲಿ

ಮನಸು ಕಲ್ಮಶಗೊಂಡಿದೆ
ಹೃದಯ ಭಾರವಾಗಿದೆ
ಹೇಳಲಾಗದ ನೋವು
ಸದಾ ನನ್ನನ್ನು ಕಾಡುತ್ತಿದೆ

ಹಿಂದೊಮ್ಮೆ ನನ್ನ ಮನಸ್ಸು
'ಅದು ಬೇಕು, ಇದು ಬೇಕು'
ಬೇಡವಾದುದನ್ನು ಕೇಳುತ್ತಿತ್ತು
ಆದರೆ ಈಗ ನನ್ನ ಮನಸ್ಸು
ಎಲ್ಲದನ್ನೂ ಸೂಕ್ಷ್ಮವಾಗಿ ಪರೀಕ್ಷಿಸುತ್ತಿದೆ.

ಒಮ್ಮೊಮ್ಮೆ ನನ್ನ ಮನಸ್ಸು
'ನಾನು ಒಬ್ಬೊಂಟಿ, ನಾನು ಒಬ್ಬೊಂಟಿ'
ಎಂದು ಹೇಳುತ್ತಿರುತ್ತದೆ.
ಆದರೆ ಅದಕೆ
ಆಮೇಲೆ
ಗೊತ್ತಾಗುತ್ತದೆ
ನಾನು ಒಬ್ಬೊಂಟಿ
ಅಲ್ಲ ... ನನಗೆ ನಾನು
ಇದ್ದೇನೆಂದು!



| ನಿಹಾರಿಕಾ ಡಿ
ಎಂಟನೇ ತರಗತಿ

# ಪುಟ್ಟ ಮತ್ತು ಸೈಕಲ್

ಒಂದು ಊರು ಇತ್ತು. ಅಲ್ಲಿ ಪುಟ್ಟ ಎಂಬ ಒಬ್ಬ ಹುಡುಗನಿದ್ದನು. ಆ ಊರಿನಲ್ಲಿ ಬರೀ ಕಾರು, ಬೈಕು, ಆಟೋ, ಬಸ್ಸುಗಳಿದ್ದವು. ಆದರೆ ಸೈಕಲ್ ಇರಲಿಲ್ಲ. ದಿನಾ ಪೇಪರ್ ಹಾಕುವವನು ಸೈಕಲ್‌ನಲ್ಲಿ ಬರುತ್ತಿದ್ದನು. ಅವನನ್ನು ನೋಡಿ ಪುಟ್ಟ ತಾನೂ ಸೈಕಲ್ ತೆಗೆಸಿಕೊಳ್ಳಬೇಕು ಅಂದುಕೊಂಡನು. ಸೈಕಲ್ ಅಂಗಡಿಗೆ ಹೋದ ಪುಟ್ಟನಿಗೆ ಹೀರೋ, ಹರ್ಕುಲಸ್, ಮೋನ್ರ್ರಾ, ಅಟ್ಲಾಸ್ ಸೈಕಲ್‌ಗಳು ಕಂಡವು. ಪುಟ್ಟನಿಗೆ ಮೋನ್ರ್ರಾ ಇಷ್ಟವಾಯಿತು. ಆದರೆ ಅದರ ಬೆಲೆ ದುಬಾರಿ. ಅದನ್ನು ತೆಗೆದುಕೊಡುವಂತೆ ಆತ ಮನೆಯಲ್ಲಿ ಹಠ ಮಾಡಿದನು. ಆತನ ಅಪ್ಪ ಕಷ್ಟಪಟ್ಟು ಹಣ ಹೊಂದಿಸಿ ಸೈಕಲ್ ಕೊಡಿಸಿದರು. ಅಂದಿನಿಂದ ಪುಟ್ಟ ಸೈಕಲ್ ಸವಾರಿ ಮಾಡತೊಡಗಿದನು. ಅವನನ್ನು ನೋಡಿದ ಊರಿನ ಮಕ್ಕಳೆಲ್ಲರೂ ಸೈಕಲ್ ತೆಗೆಸಿಕೊಂಡರು. ಇದರಿಂದ ಪ್ರೇರಿತರಾದ ಊರಿನ ಜನರು ಕಾರು, ಬೈಕು, ಆಟೋ, ಬಸ್‌ಗಳ ಬಳಕೆಯನ್ನು ಕಡಿಮೆ ಮಾಡಿ ಪರಿಸರ ಸ್ನೇಹಿ ಸೈಕಲ್ ಬಳಕೆಯನ್ನು ಹೆಚ್ಚು ಮಾಡಿದರು. ಇದರಿಂದ ಹಳ್ಳಿಯ ಪರಿಸರ ಕಾಂತಿಯಿಂದ ಕಂಗೊಳಿಸುತ್ತಿತ್ತು.



| ಎಸ್.ಪ್ರಣವ್ 7 ನೇ ತರಗತಿ

# ಈ ನಮ್ಮ ಅರಿವು ಶಾಲೆ

ಶಕ್ತಿ ಸಹನೆಯ ಮಹಾಲಯ
ಗುರುಗಳೇ ಇಲ್ಲಿ ದೇವರು
ಅವರೇ ಪೂಜೆಗೆ ಪಾತ್ರರು
ಜ್ಞಾನವೇ ಈ ಗುಡಿಯ ದೀಪ
ಭಕ್ತಿ ಗೌರವಗಳೇ ದೇವರಿಗೆ ಧೂಪ
ಶ್ರಮವೇ ಈ ಗುಡಿಗೆ ಪ್ರದಕ್ಷಿಣೆ
ಉತ್ತಮ ಫಲಿತಾಂಶವೇ ಗುರುದಕ್ಷಿಣೆ
ಕೋಗಿಲೆಯಂತೆ ಹಾಡುತ್ತಾ
ನಕ್ಷತ್ರದಂತೆ ಮಿನುಗುತ್ತಾ
ಚಂದ್ರನಂತೆ ಹೊಳೆಯುತ್ತಾ
ಸೂರ್ಯನಂತೆ ಬೆಳಕು ಚೆಲ್ಲುತ್ತಾ
ಬರುತ್ತದೆ ಈ ನಮ್ಮ ಅರಿವು ಶಾಲೆ



| ಶೀತಲ್ ಏಳನೇ ತರಗತಿ

## ಆಶ್ರಯದಾತಳು ನಾನೇ...

ವನದ ಮೌನ ಮಾತು
ಹುಲ್ಲಿನ ಮೇಲೆ, ಮರದ ಕೆಳಗೆ
ಮಲಗಿತು ತನುವು, ಮುಚ್ಚಿತು ಕಣ್ಣು
ತೆರೆಯಿತು ಮನವು, ನಡೆಯಿತು ಹೃದಯ
ಸಂವಾದ



ಲವಲೇಶವೂ
ನಾಟಕವಿಲ್ಲ
ಸಂಗೀತದ ಸ್ವರಗಳಿಲ್ಲ
ಬರೀ ಮೃದು
ಮಧುರ ಮಾತು
ಕಂಡಳು ವನದೇವಿ.

ಆಕಾರ ಅಸ್ಪಷ್ಟ, ಪ್ರತಿ ಪದವೂ ಸ್ಪಷ್ಟ
ನುಡಿದಳು ಧನ್ಯತೆಯಿಂದ
ಇವೆಲ್ಲಕ್ಕೂ ಆಶ್ರಯದಾತಳು ನಾನೇ
ಸಂರಕ್ಷಿಸಬೇಕಾದವನು ನೀನೇ...

| ಎಂ.ಮಂಜುಳಾ ಶಿಕ್ಷಕಿ

# ಸ್ನೇಹದ ಪಾಠ ಕಲಿಸಿದ ಸೈಕಲ್

ನಮ್ಮ ಶಾಲೆಗೆ ಹಲವು ಸಹಪಾಠಿಗಳು ಸೈಕಲ್‌ನಲ್ಲಿ ಬರುತ್ತಾರೆ. ನಾನು ವ್ಯಾನ್‌ನಲ್ಲಿ ಹೋಗುತ್ತೇನೆ. ನನ್ನ ಕೆಲವು ಸಹಪಾಠಿಗಳು ಸೈಕಲ್‌ನಲ್ಲಿ ಬರುವುದನ್ನು ನೋಡಿದರೆ, ನನಗೂ ಸೈಕಲ್‌ನಲ್ಲಿ ಶಾಲೆಗೆ ಹೋಗಬೇಕು ಎಂಬ ಆಸೆಯಾಗುತ್ತದೆ. ಆದರೆ ಕೆಲವು ಕಾರಣಗಳಿಂದಾಗಿ ನಾನು ನಿತ್ಯ ಸೈಕಲ್‌ನಲ್ಲಿ ಹೋಗಲಾಗುತ್ತಿಲ್ಲ. ಬದಲಾಗಿ, ಪ್ರತಿ ಶನಿವಾರ ಮಾತ್ರ ಸೈಕಲ್‌ನಲ್ಲಿ ಹೋಗುವುದನ್ನು ರೂಢಿಸಿಕೊಂಡಿದ್ದೇನೆ. ಹೀಗೆ ನಾನು ಸೈಕಲ್‌ನಲ್ಲಿ ಹೋಗುವಾಗ ನನ್ನ ಜೊತೆ ಸ್ನೇಹಿತರಾದ ಅದಿತಿ, ಮೇಘ, ಅನನ್ಯ, ಸಾಗರ್, ಅನಿರುದ್ಧ ಬರುತ್ತಾರೆ. ಅಂತೆಯೆ, ಒಂದು ಶನಿವಾರ ಶಾಲೆಗೆ ಸೈಕಲ್‌ನಲ್ಲಿ ಹೋಗಿದ್ದೆ. ಶಾಲೆ ಮುಗಿಸಿಕೊಂಡು ಮನೆಗೆ ಹಿಂದಿರುಗುತ್ತಿದ್ದ ವೇಳೆ ನನ್ನ ಹಿಂದೆ ಬಾಂಬ್ ಸಿಡಿದಂತಹ ಶಬ್ದ ಕೇಳಿಬಂತು! ಅದರಿಂದ ನನಗಾದರೋ ಗಾಬರಿಯಾಯಿತು. ತಕ್ಷಣ ಸೈಕಲ್‌ನಿಂದ ಕೆಳಗೆ ಧುಮುಕಿದೆ. ನನ್ನ ಸೈಕಲ್‌ನ ಹಿಂದಿನ ಚಕ್ರದಿಂದ ಹೊಗೆ ಬರುತ್ತಿತ್ತು. ನೋಡಿದರೆ, ಟಯರ್ ಮತ್ತು ಟ್ಯೂಬ್ ಸಿಡಿದುಹೋಗಿತ್ತು. ನನಗಂತೂ ಏನು ಮಾಡುವುದೆಂದು ದಿಕ್ಕೇ ತೋಚಲಿಲ್ಲ. ಸೈಕಲ್ ತಳ್ಳಿಕೊಂಡು ಮನೆಗೆ ಹೋಗುವುದರ ಹೊರತು ನನಗೆ ಬೇರೆ ದಾರಿ ಇರಲಿಲ್ಲ. ಆದರೆ ಆ ರೀತಿ ನನ್ನೊಬ್ಬಳನ್ನೇ ಬಿಟ್ಟು ಹೋಗುವುದು ನನ್ನ ಜೊತೆಗಿದ್ದ ಸ್ನೇಹಿತರಿಗೆ ಇಷ್ಟವಾಗಲಿಲ್ಲ. ಸರಿ, ಶಾಲೆಗೆ ಹಿಂದಿರುಗಿ, ಅಲ್ಲೇ ಸೈಕಲ್ ನಿಲ್ಲಿಸಿ ನನ್ನ ತಂದೆಗೆ ಕರೆ ಮಾಡಿ ಕರೆಸಿಕೊಂಡು ಅವರ ಸ್ಕೂಟರ್‌ನಲ್ಲಿ ಮನೆಗೆ ಹೋಗುವುದೆಂದು ಅಂದುಕೊಂಡೆ. ಆದರೆ, ಅದಕ್ಕೂ ನನ್ನ ಸ್ನೇಹಿತರು ಒಪ್ಪಲಿಲ್ಲ. ಬದಲಾಗಿ, ಪಂಕ್ಚರ್ ಆಗಿದ್ದ ನನ್ನ ಸೈಕಲ್ ಅನ್ನು ಸಾಗರ್ ಪಡೆದುಕೊಂಡ. ಆತನ ಸೈಕಲ್ ಅನ್ನು ನನಗೆ ನೀಡಿದ. ಎಲ್ಲರೂ ಒಟ್ಟಾಗಿ ನನ್ನ ಜತೆ ಶಾಲೆಗೆ ಹಿಂದಿರುಗಿ ಬಂದರು. ಶಾಲೆಯಲ್ಲಿ ಸೈಕಲ್ ನಿಲ್ಲಿಸಿ, ನನ್ನ ತಂದೆಗೆ ಕರೆ ಮಾಡಿ ಅವರ ಜೊತೆ ನಾನು ಮನೆಗೆ ಹೋದೆ. ನಂತರ ಸ್ನೇಹಿತರೆಲ್ಲರೂ ಅವರ ಮನೆಗಳಿಗೆ ತೆರಳಿದರು. ಸೋಮವಾರ ಅದಿತಿ, ಸಾಗರ್, ಅನಿರುದ್ಧ, ಶಿಕ್ಷಕರಾದ ವಿಶ್ವಣ್ಣ, ರಮೇಶಣ್ಣ ಎಲ್ಲರೂ ಸೇರಿ ಸಂಜೆ 6.30ರವರೆಗೂ ನನ್ನ ಸೈಕಲ್ ಸರಿಪಡಿಸುವ ಪ್ರಯತ್ನ ಮಾಡಿದರು. ಅಂದಿನ ಅನುಭವ ನನಗೆ ಸ್ನೇಹ, ಪ್ರೀತಿ ಮತ್ತು ಪರಸ್ಪರ ಸಹಕಾರದ ಬೆಲೆ ಹಾಗೂ ಮಹತ್ವ ಏನೆಂಬುದನ್ನು ಮತ್ತಷ್ಟು ಮನವರಿಕೆ ಮಾಡಿಕೊಟ್ಟಿತು. ಆದಕ್ಕಾಗಿ ನಾನು ನನ್ನ ಸ್ನೇಹಿತರು ಮತ್ತು ಶಿಕ್ಷಕರಿಗೆ ಚಿರಋಣಿ.



| ಸಿ.ಎಸ್.ಶ್ರೇಯಾ ಒಂಬತ್ತನೇ ತರಗತಿ



## Visitors at Arivu in the month of June 2017

- Abhishek Bhatnagar from New Delhi who is pursuing PhD in education field.
- Mr. Nagabhushan and Mr. Hari - Co-ordinators of sustainability workshop along with 45 participants.(MS Ramaiah,Bangalore)
- Shira Government School teachers and adoption commitee members Mr. Shivarudrappa and Ramachandrappa
- Tim and Phillis friend's Saskya and Swen
- Mahadeva ,Press reporter
- Corentin from France, Geography student.
- J.B.Harish, writer from Bangalore
- Dr.J Nandakumar - 6 July 2017
- Tippeswamy ,Dr. Umesh, Ramu from Shira
- Vid. Chitraveena Ravikiran



# The Relevance of Comic-Strips in Education

The one comic-strip that has enriched children's knowledge of English, History and Science beyond imagination and has afforded an authentic initiation into geography for generations is the now classic Tintin comics. Its humble beginnings go back to almost 80 years by Georges Remi, a Belgian (Aka Herge). He was interested in all that was happening at the time and packed into his comics a century's worth of mythic and historic imagery.

We should remember that it was the time when television did not exist and the global voyages undertaken by the young French reporter Tintin opened children's eyes to countries, cultures, landscapes and natural phenomena largely unheard of. Children, all over the world, started imbibing knowledge through the bizarre adventures of Tintin and his friends—the retired English sea Captain Haddock, the eccentric scientist cum inventor Cuthbert Calculus and Tintin's pet dog Snowy. The reason why these comics have not lost anything of their appeal is partly because the hero seems to personify many universal values that are appealing to the aspirations of younger minds.

Looked at from the aspect of language-learning, that which is learnt by a child by guessing at the meaning and use of words, constructions from the context is one of the most active ways and language learnt thus, retains the power and plasticity not divorced from imagination and creativity.



Some comics that deserve special attention are, Destination Moon and Explorers on the Moon that came out in early 1950's—almost a decade before the Apollo Missions. The comic-strip, Prisoners of the Sun, introduces the reader to South Americas and the Inca Civilisation that has nearly become extinct since the bloody Spanish conquests. Its incident on how knowledge of an impending total solar eclipse saves the lives of the heroic trio has even been noticed to be reminiscent of a similar scene in the movie Apocalypto.



(Shared by)
| **Vishwanath** Teacher

# Learning environment

Children are born with curiosity and possess a sense of wonder. There is an urge to understand the world around them. They come up with questions which has innate beauty in it. (For ex: Why do we get reflected in the mirror?). They have many questions which keep coming over time. Most of the times questions are not connected to curriculum we follow. I was wondering what makes children come to teachers easily.

Many volunteers who visit school, give feedback that there is a friendly atmosphere in Arivu. We teachers in Arivu are most of the time have a very unconditional relationship with children. Teachers feel it's natural to give respect for children and listen to their concerns.

Child comes to us for greeting, smiling , talking, sharing, asking questions and getting angry etc., This open environment gets created through our conduct with children.

I as an adult need to become the first person to reach, when they have something to say. This can happen only when there is no authoritative behaviour in me. The key thing to notice is I need to be aware of every moment when I am dealing with children. This poses many unexpected challenges which require spontaneous actions.

Me as an adult need to observe and be aware of every moment. I need to be open to child's concerns leaving the prejudices, which I already have about child. In short I need to be conscious so that child gets non-judgmental atmosphere. Sometimes a child's simple question destroys all my beliefs and triggers me to re-look on my own beliefs.

For me it is a continuous learning process. My sincere appreciation for people who are part of building this learning environment.



| **Kushal** Co-ordinator, Arivu



# LEOPARD AND ME

Leopards are mega carnivore. They stay single. Though I had seen them in zoo,I wanted to see a WILD ONE. I saw it when I had been to Nagarahole Safari. This is the photograph which I clicked there. After this I started to look for leopards, where others do not see often.When I went to our farm (KANANA) for diwali, I went for a walk in the night with my friends. It was a beautiful night. As we were walking, suddenly a leopard passed in front of us. We got excited. Later, when I enquired the villagers about the leopard, many told they too have seen it. Now I know that there are leopards around our farm. Later when I joined Mysore Zoo Youth Club, I learned more about leopards. I learnt to know identify their pugmarks, behaviour and cleverness. Now a days,whenever I go to our farm, I will be in look for leopard's pugmarks and excreata.



| **Amogha Varsha** Class 9

# VOLUNTEERS AT ARIVU

It's always a pleasure to welcome volunteers who contribute to our children's growth. This year we had Tim and Phillis from Germany, who involved themselves in teaching academics and in extracurricular activities with children. It was inevitable for children to speak in English with Tim and Phillis. This way most of the children of our school were able to speak English.

They involved kids in nature walk, helped in school trips, taught children education through games. On 13th June,2017 a fare well for them was arranged at Resource Center.

The kids from class 1 to class 9 appreciated Tim and Phillis for being a part of our school team. Tim and Phillis donated Hand written wooden name plates for each class, which included class 10. Our sincere thanks to Tim and Phillis.

| **Joylyn** Teacher